435

ಮೈಸೂರ ಗೆಜಿಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚಿ ತಾ|| 9, ಸನ್ 1889.

ಟಿಪ್ಪಣಿ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಗೈರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಪ್ರಸಿದ್ಧ ಪತ್ರಿಕೆ.

ತಾರೀಖು 27ನೇ ಫಿಬ್ರವರಿ 1889ನೇ ಇಸವಿ.

ಮೈಸೂರು ಲೋಕಲ್ ಸರವಿಸ್ ಮತ್ತು ಫೀಡರ್ ಪರೀಕ್ಷೆಗಳು ಜೂನ್ ತಿಂಗಳು 1889ನೇ ಇಸವಿ.

1. ಆಯಾ ಪರೀಕ್ಷೆಗಳಿಗೆ ನೇಮಕವಾಗಿರುವ ವಿಷಯಗಳಲ್ಲಿ ಮುಂದೆ ನಡಿಯತಕ್ಕ ಪರೀಕ್ಷೆಯು, ಬರುವ ಜೂನ್ ತಿಂಗಳು 17ನೇ ತಾರೀಖು ಲಾಗಾಯಿತು ಬೆಂಗಳೂರು ಪಬ್ಲಿಕ್ ಆಫಿಸಿನಲ್ಲಿರುವ ಮಧ್ಯದಹಾಲ್‌ನಲ್ಲಿಯು, ಮತ್ತು ವುತ್ತರೋತ್ತರ ಪ್ರಕಟಿಸಲ್ಪಡುವ ಇತರ ಸ್ಥಳಗಳಲ್ಲಿಯೂ ಜರಗುವವು.

2. ಪರೀಕ್ಷೆಗೆ ಹೋಗತಕ್ಕವರು ಇಂಗ್ಲೀಷ್ ಭಾಷೆಯಲ್ಲಿ ತಯಾರಾಗಿ ಅಚ್ಚು ಹಾಕಿರತಕ್ಕ ಫಾರಂಗಳ ಮೂಲಕ ತಮ್ಮ ಅಪ್ಲಿಕೇಷನ್ ಕಳುಹಿಸಬೇಕು. ಈ ಫಾರಂಗಳನ್ನು ಈ ಕೆಳಗೆ ರುಜು ಹಾಕಿರತಕ್ಕವರಿಂದ ಪಡೆದು ಬರುವ ಏಪ್ರಿಲ್ 17ನೇ ತಾರೀಖು ಅಥವಾ ಅದಕ್ಕೆ ಪೂರ್ವ ಅವರಿಗೆ ತಲಪುವ ಹಾಗೆ ಕಳುಹಿಸಬೇಕು. ಆ ತಾರೀಖು ಕಳದ ತರುವಾಯ ಅಪ್ಲಿಕೇಷನ್‌ಗಳನ್ನು ದಾಖಲೆಮಾಡಿಕೊಳ್ಳುವದಿಲ್ಲ.

3. ಇದಕ್ಕೆ ವಿಧಿಸಿರತಕ್ಕ ಫೀ ದರ ಹ್ಯಾಗೆಂದರೆ:—

ರೆವಿನ್ಯೂ ಪರೀಕ್ಷೆಗೆ	..	..	ರೂಪಾಯಿ 25
ಕ್ರಿಮಿನಲ್	ಡಿಟೋ	..	.. 25
ಸಿವಿಲ್	,,	..	.. 25
1ನೇ ಗ್ರೇಡ್ ಫೀಡರ್	ಪರೀಕ್ಷೆಗೆ	..	.. 25
2ನೇ ,,	,,	..	.. 15

4. ಹೀಗೆ ನೇಮಕವಾಗಿರತಕ್ಕ ಫೀ ಹಣವೆನ್ನು ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಖಜಾನೆಗೆ ವಾವತಿ ಮಾಡಬೇಕು. ಈ ಫೀ ವಾವತಿಯಾದ್ದಕ್ಕಾಗಿ ಖಜಾನೇ ಅಧಿಕಾರಿಗಳ ರೀತಿಯನ್ನು ಪಡೆದು ಅದನ್ನು ಅಪ್ಲಿಕೇಷನ್‌ಗೆ ಲಗತ್ತು ಮಾಡಬೇಕು.

5. ಫೀಡರ್ ಪರೀಕ್ಷೆಗೆ ನೇಮಕವಾಗಿರತಕ್ಕ ಫೀಯನ್ನು ಪರೀಕ್ಷೆಗೆ ನಿಷ್ಕರ್ಷೆಯಾಗಿರುವ ತಾರೀಖಿಗೆ 10 ದಿವಸ ಮುಂಚಿತವಾಗಿ ಯೇ ಚೀಫ್ ಕೋರ್ಟು ರಿಜಿಸ್ಟ್ರಾರ್‌ರವರಲ್ಲಿ ವಾವತಿ ಮಾಡಬೇಕು.

ಯಲ್. ಅನಂತಸ್ವಾಮಿರಾವ್,
ಪರೀಕ್ಷಕರಸಭೆಯ ಕಾರ್ಯದರ್ಶಿ.